■ ಸಸಿತೋಟ

ಚೀನಾದಲ್ಲಿ ದೊರೆಯುವ ವಿಶೇಷ ಖಾದ್ಯ. ಈ 'ಮೀಲ್ ವರ್ಮ್ಸ್' ಅಂದರೆ ಈ ಖಾದ್ಯ ಹುಳುಗಳು ನೇರವಾಗಿ ಅಡುಗೆ ಮನೆಗೆ ಹೋಗಿ ನಿಮ್ಮ ಊಟದ ಡಬ್ಬಿಗೆ ಹಾಗೇ ಬಂದು ಕೂರುತ್ತವೆ. ವೆಜ್ ಖಾದ್ಯದ ಪ್ಯಾಕ್‌ನಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಂಡರೆ ಆ ಸೌಟನ್ನೇ ಇದಕ್ಕೂ ಬಳಸಿರಬಹುದು ಎಂದು ಒಂದು ಎಕ್ಸ್‌ಕ್ಯೂಸ್ ಕೊಟ್ಟುಬಿಡಿ.



ಇನ್ನು ಮುಂದೆ ಇಂತಹ ಡ್ರೆಸ್ ಧರಿಸಿ ಬಂದ ಯುವತಿಯರ ಬಗ್ಗೆ ಸ್ವಲ್ಪ ಹುಷಾರಾಗಿರಿ. ತೋಳು ಹಿಡಿದಿರೋ, ಬೆನ್ನು ಸವರಿದಿರೋ ಅದೆಲ್ಲವೂ ಸ್ಮಾರ್ಟ್ ಡಿವೈಸ್‌ನಲ್ಲಿ ದಾಖಲಾಗುತ್ತದೆ. ಮೈ ಮುಟ್ಟಿದರೆ ಮೀಟೂ ದೂರು ದಾಖಲಿಸಲು ಬೇಕಾದ ಸಾಕ್ಷ್ಯಗಳೆಲ್ಲ ಅಚ್ಚೊತ್ತಿ ಬಿಡುತ್ತವೆ. ಇಂತಹ ಸ್ಮಾರ್ಟ್ ಉಡುಪನ್ನು ಬ್ರೆಜಿಲ್‌ನಲ್ಲಿ ತಯಾರಿಸಲಾಗಿದೆಯಂತೆ.



ತಮಿಳುನಾಡಿನ ವ್ಯಕ್ತಿಯೊಬ್ಬ ರಕ್ತ ಪರೀಕ್ಷೆಗೆಂದು ಹೋಗಿದ್ದ ಲ್ಯಾಬ್‌ನಲ್ಲಿ ತನ್ನ ಹೊಸ ಚಪ್ಪಲಿ ಕಳುವಾಯ್ತೆಂದು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾನಂತೆ. ರಾಜಸ್ತಾನದ ಗುಪ್ತಾ ಎಂಬ ಈ ವ್ಯಕ್ತಿ ಅದು ತನ್ನ ಹೆಂಡತಿ ಆಯ್ಕೆ ಮಾಡಿದ ಚಪ್ಪಲಿ ಎಂದು ಅಲವತ್ತುಕೊಂಡಿದ್ದಾನಂತೆ. ಪೊಲೀಸರು ಸೋತು ಕೈ ಚೆಲ್ಲಿದ್ದು, ಚಪ್ಪಲಿಯ ಬೆಲೆ 800 ರೂಪಾಯಿಯನ್ನು ಕೊಡಲು ಲ್ಯಾಬ್‌ನವರು ಮುಂದೆ ಬಂದಿದ್ದಾರಂತೆ. ಹಣ, ಒಡವೆ, ಸಾಕು ಪ್ರಾಣಿಗಳು.. ಹೀಗೆ ಕಳುವಾದರೆ ದೂರು ಸಲ್ಲಿಸುವ ಪಟ್ಟಿಗೆ ಇದು ಹೊಸ ಸೇರ್ಪಡೆ.

ಮುಖದ ಮೇಲೆ ಮೊಡವೆ ಮೂಡಿ ಮುಖದ ಅಂದ ಹಾಳಾದರೆ ವೈದ್ಯರ ಬಳಿ ಹೋಗುವುದು ರೂಢಿ. ಆದರೆ ಅಮೆರಿಕದ ಯುವತಿ ಲೀನಾ ಎಂಬಾಕೆ ಮನೆ ಮದ್ದು ಕಂಡು ಹಿಡಿದಿದ್ದಾಳಂತೆ. ತಮ್ಮ ಮುದ್ದಿನ ನಾಯಿಯ ಮೂತ್ರ ಕುಡಿದು ಈ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾಳೆ. ಇನ್ನು ಮುಂದೆ ಬೀದಿ ನಾಯಿ ಗೋಡೆ, ಮರದ ಬಳಿ ಹೋದಾಗಲೆಲ್ಲ ಪಾತ್ರೆ ಹಿಡಿದುಕೊಂಡು ಓಡುವವರು ಕಾಣಬಹುದೇನೋ!



ಅಮೆರಿಕದಲ್ಲಿ ವಿಚಿತ್ರ ಜನರ ವಿಚಿತ್ರ ಚಟುವಟಿಕೆಗಳಿಗೇನೂ ಕೊರತೆಯಿಲ್ಲ. ಈ ವ್ಯಕ್ತಿ ಟರ್ಕಿ ಕೋಳಿಯ ವೇಷ ಧರಿಸಿ ರೈಲ್ವೆಯಲ್ಲಿ ಪಯಣಿಸಿ ಜನರಿಗೆ ರಂಜನೆ ನೀಡಿದ. ಮಜಾ ಅಂದರೆ ಟರ್ಕಿ ಕೋಳಿಯ ಖಾದ್ಯವನ್ನೇ ಈತ ತಿಂದನಂತೆ. ಕೋಳಿ ಇನ್ನೊಂದು ಕೋಳಿಯನ್ನು ತಿನ್ನುವುದೇ ಎಂದು ಜನ ಸಾಮಾಜಿಕ ಜಾಲತಾಣದಲ್ಲಿ ಕಿಚಾಯಿಸಿದ್ದಾರಂತೆ.

ಚೀನಾದಲ್ಲಿ ನಾಗರಿಕ ಸೇವಾ ಪರೀಕ್ಷೆಗೆ ತಯಾರಿ ನಡೆಸಲು ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಸೀಟು ಕಾದಿರಿಸುವ ಸಲುವಾಗಿ ಹೊರಗೆ ತಮ್ಮ ಬ್ಯಾಗ್‌ಗಳನ್ನು ಪಾಳಿಯಲ್ಲಿಟ್ಟಿರುವ ಪರಿಯಿದು. ನಮ್ಮಲ್ಲಿ ಬಸ್, ರೈಲಿನಲ್ಲಿ ಸೀಟು ಕಾದಿರಿಸಲು ಮಾತ್ರ ಬ್ಯಾಗ್ ಬಳಕೆಯಾಗುವುದು ಗೊತ್ತಿದೆ.

